ದಿನಾಂಕ: 10-09-2008 ರಂದು ಮೆಟ್ರೋ ಸಭಾಂಗಣದಲ್ಲಿ
ಮಾನ್ಯ ಶ್ರೀ. ಯಲ್ಲಪ್ಪರೆಡ್ಡಿ, ಭಾಅಸೇ, (ನಿವೃತ್ತ) ಇವರ ಅಧ್ಯಕ್ಷತೆಯಲ್ಲಿ ನಡೆದ
*"ಸುಸ್ಥಿರ ಅಭಿವೃದ್ಧಿ ಅಧಿಕಾರಸ್ಥ ತಾಂತ್ರಿಕ ಸಲಹಾ ಸಮಿತಿ"* 6ನೇ ಸಭೆಯ ನಡವಳಿಗಳು

ಹಾಜರಿದ್ದ ಸದಸ್ಯರು

| | | | |
|---|---|---|---|
| 1 | ಮಾನ್ಯ ಶ್ರೀ. ಎ.ಎನ್. ಯಲ್ಲಪ್ಪರೆಡ್ಡಿ, *ಭಾ.ಅ.ಸೇ (ನಿ)* | ಅಧ್ಯಕ್ಷರು | 9880198549 |
| 2 | ಶ್ರೀ. ಜಯರಾಮ ಭಾ.ಅ.ಸೇ<br>ಅರಣ್ಯ ಸಂರಕ್ಷಣಾಧಿಕಾರಿಗಳು ಬಿ.ಎಂ.ಆರ್.ಸಿ.ಎಲ್ | ಸದಸ್ಯರು | 9900214158 |
| 3. | ಶ್ರೀ.ಎಸ್.ಎ.ಹ್ಯೂಬರ್ಟ್. ಎಸ್.ಎಫ್.ಎಸ್<br>ಉಪ ಅರಣ್ಯ ಸಂರಕ್ಷಣಾಧಿಕಾರಿಗಳು<br>ಬಿಬಿಎಂಪಿ, ಬೆಂಗಳೂರು. | ಸದಸ್ಯರು | 9980822315 |
| 4. | ಶ್ರೀ. ಎಂ. ಆರ್. ಸುರೇಶ್, *ಸ.ಅ.ಸಂ* | ಸಂಚಾಲಕರು | 9845174447 |
| 5. | ಶ್ರೀ. ಎಚ್.ಕೆ. ಜಗದೀಶ್, ಸ.ಅ.ಸಂ | ಸದಸ್ಯರು | 9448113664 |
| 6 | ಡಾ. ಹೆಚ್. ಪರಮೇಶ್<br>ಮಾನ್ಯ ಸದಸ್ಯರು | ಸದಸ್ಯರು | 9845022689<br>225566738 |
| 7 | ಡಾ. ಡಿ.ಸಿ. ಶರ್ಮ<br>ಮಾನ್ಯ ಸದಸ್ಯರು | ಸದಸ್ಯರು | 9845691706<br>23322009 |
| 8 | ಶ್ರೀ. ಸುಬ್ಬರಾಯನ್ ಪ್ರಸನ್ನ<br>ಮಾನ್ಯ ಸದಸ್ಯರು | ಸದಸ್ಯರು | 28602228 |
| 9 | ಶ್ರೀ. ಕೆ.ಆರ್. ಮಹದೇವಸ್ವಾಮಿ<br>ಉಪ ಮುಖ್ಯ ಅಭಿಯಂತರರು, ಬಿಎಂಆರ್‌ಸಿಎಲ್ | ಅರ್ಜಿದಾರಸ್ಥ ಅಧಿಕಾರಿಗಳು | 9448291153 |
| 10 | ಶ್ರೀ. ಸುಬ್ರಹ್ಮಣ್ಯ ಗುಡ್ಗೆ<br>ಉಪ ಮುಖ್ಯ ಅಭಿಯಂತರರು, ಬಿಎಂಆರ್‌ಸಿಎಲ್ | ಅರ್ಜಿದಾರಸ್ಥ ಅಧಿಕಾರಿಗಳು | 9448291151 |
| 11 | ಶ್ರೀ. ಪುಟ್ಟಸ್ವಾಮಿ<br>ವಲಯ ಅರಣ್ಯಾಧಿಕಾರಿಗಳು, ಬಿಬಿಎಂಪಿ | ಅರ್ಜಿದಾರಸ್ಥ ಅಧಿಕಾರಿಗಳು | 9900247712 |
| 12 | ಶ್ರೀ. ಎಂ.ಎಸ್.ರವಿಕುಮಾರ್<br>ವಲಯ ಅರಣ್ಯಾಧಿಕಾರಿಗಳು, ಬಿಬಿಎಂಪಿ | ಅರ್ಜಿದಾರಸ್ಥ ಅಧಿಕಾರಿಗಳು | 9480017818 |

ಗೈರು ಹಾಜರಾದ ಸದಸ್ಯರು :

| | | | |
|---|---|---|---|
| 1 | ಡಾ. ಶೇಖರ್ ಮಧು | ಸದಸ್ಯರು | 22932245 |
| 2 | ಡಾ. ಕರೋಲ್ ಉಪಾಧ್ಯಾಯ | ಸದಸ್ಯರು | 9341311453<br>22185141 |
| 3 | ಡಾ. ಶಿರಡಿ ಪ್ರಸಾದ್ ಟಿಕೂರ್ | ಸದಸ್ಯರು | 9448079790<br>22453655<br>26710740 |

ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ಪರಿಸರ ಅಧಿಕಾರಿಗಳು, ಬಿ.ಎಂ.ಆರ್.ಸಿ.ಎಲ್ ರವರು:- ಸಭೆಗೆ ಹಾಜರಿದ್ದ ಎಲ್ಲಾ ಗೌರವಾನ್ವಿತ ಸದಸ್ಯರನ್ನು ಮತ್ತು ಅರಣ್ಯ ಘಟಕದ ಅಧಿಕಾರಿಗಳನ್ನು ಸ್ವಾಗತಿಸಿ ಸಭೆಗೆ ಚಾಲನೆ ನೀಡಿದರು.

ಮಾನ್ಯ ಅಧ್ಯಕ್ಷರು : ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಉಪ ವಿಭಾಗ-2 ಇವರಿಗೆ ಅವರು ಭೇಟಿ ನೀಡಿದ ಸ್ಥಳಗಳ ಮತ್ತು ತಯಾರಿಸಿದ ವರದಿಗಳನ್ನು ಸಲ್ಲಿಸಲು ಸೂಚಿಸಿದರು. ಮುಂದುವರೆದು ಸಂಚಾಲಕರಿಗೆ ಅಧ್ಯಕ್ಷರು ಬಿಡಬ್ಲ್ಯೂಎಸ್ಎಸ್‌ಬಿ, ಅಭಿಯಂತರರು, ಬಿಡಿಎ ಮತ್ತು ಅರಣ್ಯ ಘಟಕ, ಬಿಎಂಆರ್‌ಸಿಎಲ್ ಇವರುಗಳಿಂದ ನೆರೆ ತೂಬು (Flood gate) ಪ್ರದೇಶಗಳ ವಿವರಗಳನ್ನು ಪಡೆಯಲು ಮತ್ತು ಶ್ರೀ. ವೆಂಕಟರಾಮನ್‌ರವರನ್ನು ಒಳಗೊಂಡಂತೆ ಎಲ್ಲರೊಡನೆ ಚರ್ಚಿಸಿ ವಿವರಗಳನ್ನು ನೀಡಲು ಸೂಚಿಸಿದರು.

ಮಾನ್ಯ ಅಧ್ಯಕ್ಷರು : ಅವರ ಚರ್ಚೆಯನ್ನು ಮುಂದುವರೆಸುತ್ತಾ ಡಾ. ಡಿ.ಸಿ. ಶರ್ಮಾರವರು ನೈಸ್ ರಸ್ತೆ ಕಾಮಗಾರಿಗಳನ್ನು, ಪರಿಶೀಲಿಸಿ (ಎಲೆಕ್ಟ್ರಾನಿಕ್‌ಸಿಟಿ ಯಿಂದ ಮೈಸೂರು ರಸ್ತೆವರೆಗೆ) ಒಂದು ಕಾರ್ಯ ಯೋಜನೆಯನ್ನು ತಯಾರಿಸಿ ಸಲ್ಲಿಸಲು ಕೋರಿದರು.

ಡಾ. ಡಿ.ಸಿ ಶರ್ಮ: ರವರು ಇದಕ್ಕೆ ಪ್ರತಿಕ್ರಿಯಿಸುತ್ತಾ ಅವರ ಕಾಮಗಾರಿಗಳ ಪರಿಶೀಲನೆಯು ಮರಗಳ ತೆರವುಗೊಳಿಸುವ ಬಗ್ಗೆ ಮಾತ್ರ ಈ ಸಮಿತಿಯು ಚರ್ಚಿಸಬೇಕಾಗುತ್ತದೆಂದು ಅಭಿಪ್ರಾಯಪಟ್ಟರು.

ಮಾನ್ಯ ಅಧ್ಯಕ್ಷರು : ಈ ಸಂಬಂಧ ಪ್ರತಿಕ್ರಿಯಿಸುತ್ತಾ ಸಮಿತಿಯು ಮರಗಳ ತೆರವುಗೊಳ್ಳುವಿಕೆಗೆ ಮಾತ್ರ ಸೀಮಿತವಾಗಿರದೆ ಒಳಚರಂಡಿ ವ್ಯವಸ್ಥೆ, ರಸ್ತೆ ಕಾಮಗಾರಿಗಳು ಮುಂತಾದ ಸುಸ್ಥಿರ ಅಭಿವೃದ್ಧಿ ಕಾಮಗಾರಿಗಳು ಪರಿಶೀಲನೆ ಸಲುವಾಗಿ ಈ ಸುಸ್ಥಿರ ಸಮಿತಿ ರಚನೆಯಾಗಿರುವುದರಿಂದ ಈ ಸಮಿತಿಗೆ ಮರಗಳನ್ನು ತೆರವುಗೊಳಿಸುವ ಸಂಬಂಧ ಮಾತ್ರ ತೀರ್ಮಾನ ತೆಗೆದುಕೊಳ್ಳಲು ರಚನೆಯಾಗಿರುವುದಿಲ್ಲವೆಂದು ಸ್ಪಷ್ಟೀಕರಣ ನೀಡಿದರು.

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಉಪ ವಿಭಾಗ-2 : ಇವರು ಮೈಸೂರು ರಸ್ತೆ ಮತ್ತು ಮಾಗಡಿ ರಸ್ತೆಗಳ ವಿಸ್ತರಣೆ ಸಂಬಂಧ ಮರಗಳನ್ನು ತೆರವುಗೊಳಿಸುವ ವಿವರಗಳನ್ನೊಳಗೊಂಡ ವರದಿಯನ್ನು ಎಲ್ಲಾ ಗೌರವಾನ್ವಿತ ಸದಸ್ಯರಿಗೆ ನೀಡಿದರು ಮತ್ತು ಈ ಸಂಬಂಧ **"ಯೋಜನಾ ಮುಖ್ಯಾರ್ಥ"** (Power Point Presentation) ವನ್ನು ಪ್ರಸ್ತುತಪಡಿಸಿದರು.

ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ಪರಿಸರಾಧಿಕಾರಿಗಳು, ಬಿ.ಎಂ.ಆರ್.ಸಿ.ಎಲ್: ಇವರು "ಯೋಜನಾ ಮುಖ್ಯಾರ್ಥ" ದ ಎಲ್ಲಾ ಅಂಶಗಳನ್ನು ಸಮಗ್ರವಾಗಿ ವಿವರಗಳನ್ನು ನೀಡುತ್ತಾ ನಿರ್ಧಾರಗಳನ್ನು ಯಾವ ರೀತಿಯ ತಾಂತ್ರಿಕ ಸಲಹೆಗಳ ಮೇಲೆ ನಿಗಧಿಪಡಿಸಿದೆ ಎಂಬುದನ್ನು ಎಲ್ಲಾ ಸದಸ್ಯರಿಗೆ ವಿವರಗಳನ್ನು ನೀಡಿದರು. ಈ ರಸ್ತೆಗಳ ವಿಸ್ತರಣೆಯಲ್ಲಿ ಎಡಭಾಗದಲ್ಲಿ 20 ಮರಗಳಿದ್ದು 4 ಮರಗಳ ರೆಂಬೆಗಳನ್ನು ಮಾತ್ರ ತೆಗೆಯಲು ಉಳಿದ 16 ಮರಗಳನ್ನು ಪೂರ್ಣ ಪ್ರಮಾಣದಲ್ಲಿ ತೆಗೆಯಬೇಕಾಗುವುದೆಂದು ತಿಳಿಸುತ್ತಾ ಬಲಭಾಗದ 31 ಮರಗಳನ್ನು ಪೂರ್ಣವಾಗಿ ತೆಗೆಯಬೇಕಾಗುವುದೆಂದು ತಿಳಿಸಿದರು.

**ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಉಪ ವಿಭಾಗ-1** : ಇವರು ಈ ಸಂಬಂಧ ಬೆಂಗಳೂರು ಮೆಟ್ರೋ ರೈಲ್ ನಿಗಮ ನಿಯಮಿತ ಇವರ ವತಿಯಿಂದ ಪರಿಹಾರಾತ್ಮಕ ಅರಣ್ಯೀಕರಣ ಕಾಮಗಾರಿಗಳನ್ನು ನಿರ್ವಹಿಸಲು ಹಣ ಪಾವತಿಯಾಗಿದ್ದು ಪರಿಹಾರಾತ್ಮಕ ಅರಣ್ಯೀಕರಣ ಕಾಮಗಾರಿಗಳು ಈಗಾಗಲೇ ನಿರ್ವಹಿಸಿರುವುದಾಗಿ ತಿಳಿಸಿದರು.

**ಡಾ. ಡಿ.ಸಿ ಶರ್ಮ:** ರವರು ಬಿ.ಸಿ.ಸಿ ಲೇಔಟ್ ಪ್ರದೇಶದಲ್ಲಿ ಸಾಕಷ್ಟು ಸ್ಥಳಾವಕಾಶವಿದ್ದು ಸಸಿಗಳನ್ನು ನೆಡುವ ಅವಕಾಶ ಇದೆ ಎಂದು ಸಭೆಗೆ ತಿಳಿಸಿದರು.

**ಮಾನ್ಯ ಅಧ್ಯಕ್ಷರು** : ಈ ಸಂಬಂಧ ಮಾತನಾಡುತ್ತಾ ಬಿ.ಸಿ.ಸಿ ಲೇಔಟ್ ಹತ್ತಿರ ರೈಲ್ವೆ ಬ್ರಿಡ್ಜ್ ಎಡಭಾಗವನ್ನು ಪರಿಶೀಲಿಸಿ ಅವರ ಅಭಿಪ್ರಾಯವನ್ನು ಸಭೆಯಲ್ಲಿ ಮಂಡಿಸಲು ಡಾ.ಡಿ.ಸಿ.ಶರ್ಮ ರವರಿಗೆ ತಿಳಿಸಿದರು.

**ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಉಪ ವಿಭಾಗ-2** ಇವರು **"ಯೋಜನಾ ಮುಖ್ಯಾರ್ಥ"** ಪ್ರಸ್ತುತಪಡಿಸುತ್ತ ವಿಜಯನಗರದಿಂದ ಹೊಸಹಳ್ಳಿ ನಿಲ್ದಾಣದವರೆಗೆ ಬಲಭಾಗದಲ್ಲಿ ಒಟ್ಟು 60 ಮರಗಳನ್ನು ತೆರವುಗೊಳಿಸುವ ಸಂಬಂಧ ವಿವರಗಳನ್ನು ನೀಡಿದರು. ಈ ಸಂಬಂಧ 60 ಮರಗಳಲ್ಲಿ 16 ಮರಗಳ ರೆಂಬೆಗಳನ್ನು ತೆರವುಗೊಳಿಸಲು ಮತ್ತು 44 ಮರಗಳನ್ನು ಪೂರ್ಣವಾಗಿ ತೆರವುಗೊಳಿಸಬೇಕಾಗಬಹುದೆಂದು ತಿಳಿಸಿದರು. ಉಳಿದಂತೆ 152 ಮರಗಳನ್ನು ಯಥಾಸ್ಥಿತಿ ಸಂರಕ್ಷಿಸುವುದಾಗಿ ತಿಳಿಸಿದರು ಮತ್ತು ಈಗಾಗಲೇ ಈ ಪ್ರದೇಶದ ವ್ಯಾಪ್ತಿಗೆ ಬರುವ ನಾಗರಬಾವಿ ರಸ್ತೆಯಲ್ಲಿ 460 ಸಸಿಗಳನ್ನು ಬೆಳೆಸಿರುವುದಾಗಿ ಸೂಚಿಸಿದರು.

ಈ ಸಂಬಂಧ **ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ಪರಿಸರಾಧಿಕಾರಿಗಳು, ಬಿ.ಎಂ.ಆರ್.ಸಿ.ಎಲ್** ಇವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಬಿ.ಎಂ.ಆರ್.ಸಿ.ಎಲ್ ಕಾಮಗಾರಿಗಳ ಸಂಬಂಧ ತೆರವುಗೊಳಿಸಬೇಕಾದ ಮರಗಳ ಸಂಬಂಧ ಪರಿಹಾರಾತ್ಮಕ ನೆಡುತೋಪು ಬೆಳೆಸಲು ಹಣವನ್ನು ಬಿಡುಗಡೆ ಮಾಡಿದ್ದು ಪಾಲಿಕೆಯ ವತಿಯಿಂದ ಉತ್ತಮ ರೀತಿಯಲ್ಲಿ ನೆಡುತೋಪು ನಿರ್ಮಾಣ ಕಾರ್ಯ ನಡೆದಿರುವುದಾಗಿ ತಿಳಿಸಿದರು.

ಈ ಸಂಬಂಧ **ಡಾ. ಡಿ.ಸಿ ಶರ್ಮ:** ರವರು ಪ್ರತಿಕ್ರಿಯಿಸುತ್ತ ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಬೆಳೆಸಿರುವ ಪರಿಹಾರಾತ್ಮಕ ಸಸಿಗಳ ನೆಟ್ಟ ಕಾಮಗಾರಿಗಳ ಅಂಕಿ ಅಂಶಗಳನ್ನು ಪಡೆಯುವುದು ಸೂಕ್ತವೆಂದು ಅಭಿಪ್ರಾಯಪಟ್ಟರು.

**ಮಾನ್ಯ ಅಧ್ಯಕ್ಷರು** : ಈ ಸಂಬಂಧ ಚರ್ಚಿಸುತ್ತ 1978 ನೇ ಇಸವಿಯಿಂದ ಬೆಂಗಳೂರು ನಗರ ವ್ಯಾಪ್ತಿಯಲ್ಲಿ ವಿವಿಧ ಹಂತದಲ್ಲಿ ಅಂದರೆ 1978 ರ ನಂತರ ಈವರೆವಿಗೆ ನಗರ ಅರಣ್ಯೀಕರಣವನ್ನು ಭಾರೀ ಪ್ರಮಾಣದಲ್ಲಿ ಸಸಿ ನೆಡುವ ಕಾರ್ಯಕ್ರಮ ನಿರ್ವಹಿಸಿರುವುದಾಗಿ ತಿಳಿಸಿದರು ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಉಪ ವಿಭಾಗ-2 ಇವರು ಪ್ರಸ್ತಾಪಿಸಿರುವಂತೆ ಈಗಾಗಲೇ ನೆಟ್ಟಿರುವ ಸಸಿಗಳನ್ನು ಡಾ. ಡಿ.ಸಿ ಶರ್ಮ ರವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಬಹುದೆಂದು ತಿಳಿಸಿದರು.

**ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ಪರಿಸರಾಧಿಕಾರಿಗಳು, ಬಿ.ಎಂ.ಆರ್.ಸಿ.ಎಲ್** : ರವರು ಪ್ರತಿಕ್ರಿಯಿಸುತ್ತ 1994-97 ರ ಅವಧಿಯಲ್ಲಿ ನಗರದಲ್ಲಿ ಬೃಹತ್ ಪ್ರಮಾಣದಲ್ಲಿ ಸಸಿಗಳನ್ನು ನೆಡುವ ಕಾರ್ಯವನ್ನು ನಿರ್ವಹಿಸಿದ್ದು ಈ ಕಾಮಗಾರಿಯನ್ನು ನಗರದ ಹೊರ ವಲಯದಲ್ಲೂ ಸಹ ಸಮರ್ಪಕವಾಗಿ ನಿರ್ವಹಿಸಿರುವುದಾಗಿ ತಿಳಿಸಿದರು. ಮುಂದುವರೆದು ವಿಜಯನಗರ ಬುಲೇವಾರ್ಡ್ ಮೇಲ್ಭಾಗದ ಪ್ರದೇಶದಲ್ಲಿ ಆಯ್ದ ಸಮರ್ಪಕವಾದ ಸಸಿಗಳನ್ನು ನೆಡುವುದು ಸೂಕ್ತವೆಂದು ಸಲಹೆ ನೀಡಿದರು.

ಮಾನ್ಯ ಅಧ್ಯಕ್ಷರು : ಇದಕ್ಕೆ ಪ್ರತಿಕ್ರಿಯಿಸುತ್ತ ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ಪರಿಸರಾಧಿಕಾರಿಗಳು, ಬಿ.ಎಂ.ಆರ್.ಸಿ.ಎಲ್ ಇವರು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಉಪ ವಿಭಾಗ-2 ಇವರೊಡನೆ ಸ್ಥಳಕ್ಕೆ ಭೇಟಿ ನೀಡಿ ಆ ಸ್ಥಳದಲ್ಲಿ ನೆಡ ಬಹುದಾದ ಸಸಿಗಳ ಬಗ್ಗೆ ಸೂಕ್ತ ನಿರ್ದೇಶನ ನೀಡಲು ಸೂಚಿಸಿದರು. ಮುಂದುವರೆದು ಬುಲೇವಾರ್ಡ್ ಪ್ರದೇಶದಲ್ಲಿ ವಿಶೇಷವಾಗಿ ಆಯ್ದ ಸಸಿಗಳನ್ನು ಬೆಳೆಸುವುದು ಸಮಂಜಸವೆಂದು ಅಭಿಪ್ರಾಯಪಟ್ಟರು.

**ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ಪರಿಸರಾಧಿಕಾರಿಗಳು, ಬಿ.ಎಂ.ಆರ್.ಸಿ.ಎಲ್** : ಇವರು ಬುಲೇವಾರ್ಡ್ ಪ್ರದೇಶಗಳಲ್ಲಿ 50 ಮೀಟರ್‌ಗಳ ಅಂತರದಲ್ಲಿ ಮೌರ್ಯ ಮತ್ತು ಮಧುಮತಿ ಜಾತಿಯ ಸಸಿಗಳನ್ನು ಬೆಳೆಸುವುದು ಸೂಕ್ತವೆಂದು ತಿಳಿಸಿದರು.

ಮಾನ್ಯ ಅಧ್ಯಕ್ಷರು : ಪ್ರತಿಕ್ರಿಯಿಸುತ್ತ ಅಲಂಕಾರಿಕ ಮತ್ತು ಇತರೆ ಜಾತಿಯ ಸಸಿಗಳನ್ನು ಮತ್ತು ಮರಗಳ ಜಾತಿಯ ಸಸಿಗಳನ್ನು ಮಿಶ್ರಣ ಮಾಡಿ ಒಟ್ಟಾರೆಯಾಗಿ ಬೆಳೆಸುವುದು ಸೂಕ್ತವೆಂದು ಅಭಿಪ್ರಾಯಪಟ್ಟರು. ಮುಂದುವರೆದು ಅಧ್ಯಕ್ಷರು ಮತ್ತು ಗೌರವಾನ್ವಿತ ಸದಸ್ಯರು ವಿಸ್ತರಣಾ ನಕ್ಷೆಯನ್ನು ಪರಿಶೀಲಿಸಿ ಸಮರ್ಪಕತೆಯ ಬಗ್ಗೆ ಅನುಮೋದನೆಯನ್ನು ವ್ಯಕ್ತಪಡಿಸಿದರು. ಮಾನ್ಯ ಅಧ್ಯಕ್ಷರು ಕಾರ್ಡ್ ರಸ್ತೆಯ ಬುಲೇವಾರ್ಡ್ ಪ್ರದೇಶದಲ್ಲಿ ಎಲ್ಲೆಲ್ಲಿ ಅವಕಾಶವಿದೆಯೋ ಆ ಸ್ಥಳಗಳಲ್ಲಿ ಪರಿಸರ ಸಮತೋಲನ ಮತ್ತು ಸಮುದಾಯದ ಇಚ್ಛೆಗೆ ಅನುಗುಣವಾಗಿ ಸಸಿಗಳನ್ನು ಬೆಳೆಸುವುದು ಸಮರ್ಪಕವೆಂದು ತಿಳಿಸಿದರು.

ಡಾ. ಸುಬ್ಬರಾಯ ಪ್ರಸನ್ನ : ರವರು ಈ ಸಂಬಂಧ ಪ್ರತಿಕ್ರಿಯೆ ನೀಡುತ್ತ ವಾಹನ ಸಂಚಾರ ಮತ್ತು ಪಾದಚಾರಿ ಮಾರ್ಗದಲ್ಲಿ ಲಭ್ಯವಿರುವ ಸ್ಥಳಗಳಲ್ಲಿಯೂ ಸಹ ಸಸಿಗಳನ್ನು ನೆಡುವುದು ಸೂಕ್ತವೆಂದು ಅಭಿಪ್ರಾಯಪಟ್ಟರು.

ಈ ಸಂಬಂಧ **ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ಪರಿಸರಾಧಿಕಾರಿಗಳು, ಬಿ.ಎಂ.ಆರ್.ಸಿ.ಎಲ್** : ಇವರು ಪ್ರತಿಕ್ರಿಯಿಸುತ್ತ ಈ ಕಾರ್ಯಕ್ರಮದಿಂದ ಉಪಯುಕ್ತ ಸೇವಾ ವ್ಯವಸ್ಥೆಗೆ ತೊಂದರೆಯಾಗುವುದೆಂದು ಮತ್ತು ಪಾದಚಾರಿಗಳಿಗೆ ಅಡಚಣೆಯಾಗುವ ಅವಕಾಶಗಳಿವೆ ಎಂದು ಅಭಿಪ್ರಾಯಪಟ್ಟರು.

**ಡಾ. ಸುಬ್ಬರಾಯ ಪ್ರಸನ್ನ** : ರವರು ಪ್ರತಿಕ್ರಿಯಿಸುತ್ತ ಉಪಯುಕ್ತ ಸೇವಾ ವ್ಯವಸ್ಥೆ ಬದಲಾವಣೆ ನಂತರ ಸಸಿಗಳನ್ನು ನೆಡುವ ಕಾರ್ಯವನ್ನು ನಿರ್ವಹಿಸಬಹುದೆಂದು ತಿಳಿಸಿದರು ಮತ್ತು ಹೊರ ವರ್ತುಲ ರಸ್ತೆಯಲ್ಲಿ ಮತ್ತು ಒಳ ವರ್ತುಲ ರಸ್ತೆಯಲ್ಲಿ ಉಪಯುಕ್ತ ಸೇವಾ ಬದಲಾವಣೆ ನಂತರ ನೆಡುವುದು ಸೂಕ್ತವೆಂದು ತಿಳಿಸಿದರು, ತಪ್ಪಿದಲ್ಲಿ ಬೃಹತ್ ಪ್ರಮಾಣದ ಕಾಂಕ್ರೀಟ್ ವ್ಯವಸ್ಥೆಯನ್ನು ಅಳವಡಿಸಿದ ನಂತರ ಈ ಸಸಿಗಳನ್ನು ನೆಡುವ ಕಾಮಗಾರಿಗೆ ಅವಕಾಶವಾಗುವುದೆಂದು ತಿಳಿಸಿದರು.

**ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ಪರಿಸರಾಧಿಕಾರಿಗಳು, ಬಿ.ಎಂ.ಆರ್.ಸಿ.ಎಲ್** : ರವರು ಈ ಕಾಮಗಾರಿಯನ್ನು ವೇಗ ಮಾರ್ಗ ರಸ್ತೆಗಳಲ್ಲಿ ಈ ಪ್ರಯತ್ನ ಮಾಡಬಹುದೆಂದು ತಿಳಿಸಿದರು.

ಮಾನ್ಯ ಅಧ್ಯಕ್ಷರು : ಪ್ರತಿಕ್ರಿಯಿಸುತ್ತ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಉಪ ವಿಭಾಗ-2 ಇವರು ಡಾ. ಸುಬ್ಬರಾಯ ಪ್ರಸನ್ನ ಮತ್ತು ಶ್ರೀ. ಕೃಷ್ಣಾರೆಡ್ಡಿ, ಮುಖ್ಯ ಅಭಿಯಂತರರು (ಬೃಹತ್ ರಸ್ತೆಗಳು) ಇವರ ಜೊತೆ ಪರಿಶೀಲಿಸಿ ಪಾದಚಾರಿಗಳ ಸುರಕ್ಷತೆಯ ದೃಷ್ಟಿಯಿಂದ ಬಫರ್ ಬುಲೇವಾರ್ಡ್ ಪಾದಚಾರಿ ನಿರ್ಮಾಣದ ಬಗ್ಗೆ ಸೂಕ್ತ ಕ್ರಮದ ಬಗ್ಗೆ ಪರಿಶೀಲಿಸಬಹುದೆಂದು ಸೂಚಿಸಿದರು.

ಡಾ. ಸುಬ್ಬರಾಯ ಪ್ರಸನ್ನ : ರವರು ಪ್ರತಿಕ್ರಿಯಿಸುತ್ತ ಬಹುತೇಕ ಪಾದಚಾರಿಗಳು ಮಕ್ಕಳು ಮತ್ತು ವಯೋವೃದ್ದರು ಆಗಿರುವುದರಿಂದ ಅಪಘಾತಗಳು ನಡೆಯುವ ಸಂಭವ ಹೆಚ್ಚಾಗಿರುವುದರಿಂದ ಈ ರೀತಿಯ ಘಟನೆಗಳು ನಡೆಯದೇ ಇರುವ ರೀತಿಯಲ್ಲಿ ಸಸಿಗಳನ್ನು ಬೆಳೆಸುವ ಕ್ರಮ ತೆಗೆದುಕೊಳ್ಳುವುದು ಸಾರ್ವಜನಿಕ ಹಿತದೃಷ್ಟಿಯಿಂದ ಸೂಕ್ತವೆಂದು ಅಭಿಪ್ರಾಯಪಟ್ಟರು.

ಡಾ. ಡಿ.ಸಿ. ಶರ್ಮ: ರವರು ಈ ವಿಷಯವನ್ನು ಒಂದು ವಿಸ್ತರಣೆಯಲ್ಲಿ ಈ ಪ್ರಯತ್ನ ಮಾಡುವುದು ಸಮಂಜಸವೆಂದು ಅಭಿಪ್ರಾಯಪಟ್ಟರು.

ವಲಯ ಅರಣ್ಯಾಧಿಕಾರಿಗಳು ( ಪಶ್ಚಿಮ ವಲಯ) : ಇವರು ನಂದಿನಿ ಬಡಾವಣೆಯಲ್ಲಿ ಮತ್ತು ಮಹಾಲಕ್ಷ್ಮಿ ಬಡಾವಣೆಯಲ್ಲಿ 3,000 ಸಸಿಗಳನ್ನು ಈಗಾಗಲೇ ಬೆಳೆಸಿರುವುದಾಗಿ ತಿಳಿಸುತ್ತ ಇನ್ನೂ 1,500 ರಿಂದ 2000 ಸಸಿಗಳ ವರೆಗೆ ಬೆಳೆಸಬಹುದೆಂದು ಸಭೆಯ ಗಮನಕ್ಕೆ ತಂದರು.

ಮಾನ್ಯ ಅಧ್ಯಕ್ಷರು: ಪ್ರತಿಕ್ರಿಯಿಸುತ್ತ ಬಿ.ಎಂ.ಆರ್.ಸಿ.ಎಲ್ ವತಿಯಿಂದ ಹಣ ಬಿಡುಗಡೆಯಾಗುವುದರಿಂದ ಉಳಿದ ಹೆಚ್ಚುವರಿ 1,500 ಸಸಿಗಳನ್ನು ನೆಟ್ಟು ಪೋಷಿಸಲು ಆಯಾ ಕಟ್ಟಿನ ಪ್ರದೇಶಗಳನ್ನು ಗುರುತಿಸಿ ಸಸಿಗಳನ್ನು ನೆಡುವ ಕ್ರಮ ತೆಗೆದುಕೊಳ್ಳಲು ತಿಳಿಸಿದರು. ಈ ಕ್ರಮದಿಂದ 10 ಮರಗಳನ್ನು ತೆರವುಗೊಳಿಸಿದರೆ 5,000 ಸಸಿಗಳನ್ನು ನೆಟ್ಟಿರುವ ಕ್ರಮ ತೆಗೆದುಕೊಂಡಂತೆ ಆಗುವುದೆಂದು ಅಭಿಪ್ರಾಯಪಟ್ಟರು. ಮುಂದುವರೆದು, ಈ ಸಂಬಂಧ ಸ್ಥಳೀಯ ಹಿರಿಯ ನಾಗರೀಕರಲ್ಲಿ ಪರಿಸರ ಜಾಗೃತಿ ಮೂಡಿಸುವ ಕ್ರಮ ತೆಗೆದುಕೊಂಡು ಪಾರದರ್ಶಕವಾಗಿ ಕ್ರಮ ತೆಗೆದುಕೊಳ್ಳಲು ಸೂಚಿಸಿದರು. ಈ ಕ್ರಮವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮತ್ತು ಬಿ.ಎಂ.ಆರ್.ಸಿ.ಎಲ್‌ಗಳ ವೆಬ್ ಸೈಟ್‌ಗಳಲ್ಲಿ ಈ ಮಾಹಿತಿಯನ್ನು ಪ್ರಚುರ ಪಡಿಸಬೇಕೆಂದು ಸೂಚಿಸಿದರು.

ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ಪರಿಸರಾಧಿಕಾರಿಗಳು, ಬಿ.ಎಂ.ಆರ್.ಸಿ.ಎಲ್ : ರವರು ಸಸಿಗಳನ್ನು ನೆಡುವ ವಿಷಯದಲ್ಲಿ ಬಿದಿರು ಸಸಿಗಳು ಜಾರಿಕೆಯಿಂದ ಮತ್ತು ಅಪಾಯದಿಂದ ಕೂಡಿರುವ ಕಾರಣ ಬಿದಿರು ಸಸಿಗಳನ್ನು ಬೆಳೆಸುವುದನ್ನು ತಪ್ಪಿಸಬೇಕೆಂದು ಅಭಿಪ್ರಾಯಪಟ್ಟರು.

ಮಾನ್ಯ ಅಧ್ಯಕ್ಷರು : ಈ ಸಲಹೆಯನ್ನು ಅನುಮೋದಿಸಿದರು. ಮುಂದುವರೆದು ಅಧ್ಯಕ್ಷರು ಸಾಧ್ಯವಾದಷ್ಟು ಮಟ್ಟಿಗೆ ವಿಸ್ತರಣೆಯನ್ನು ಸೂಕ್ಷ್ಮವಾಗಿ ಮಾಡುವುದು ಅವಶ್ಯಕವೆಂದು ಅಭಿಪ್ರಾಯಪಟ್ಟರು.

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಉಪ ವಿಭಾಗ-2 : ಇವರು ಮಹಾಲಕ್ಷ್ಮಿ ಬಡಾವಣೆಯ ವಿಸ್ತರಣಾ ಪ್ರದೇಶಗಳಲ್ಲಿ ಒಂದು ಉದ್ಯಾನವನವಿದ್ದು ಸಸಿಗಳನ್ನು ನೆಡಲು ಅವಕಾಶವಿಲ್ಲವೆಂದು ತಿಳಿಸಿದರು.

ಈ ಸಂಬಂಧ ಡಾ. ಡಿ.ಸಿ ಶರ್ಮ ರವರು ಪ್ರತಿಕ್ರಿಯಿಸುತ್ತ ಉದ್ಯಾನವನದ ಮಧ್ಯ ಸ್ಥಾಯಿಯಲ್ಲಿನ ಲಾನ್‌ಗಳಲ್ಲಿ ಸಸಿಗಳನ್ನು ಬೆಳೆಸುವುದು ಸೂಕ್ತವೆಂದು ಅಭಿಪ್ರಾಯಪಟ್ಟರು.

ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ಪರಿಸರಾಧಿಕಾರಿಗಳು, ಬಿ.ಎಂ.ಆರ್.ಸಿ.ಎಲ್ : ಇವರು "ಯೋಜನಾ ಮುಖ್ಯಾರ್ಥ" ದ ವಿಷಯದಲ್ಲಿ ಪ್ರತಿಕ್ರಿಯಿಸುತ್ತ ಮರಗಳನ್ನು ತೆರವುಗೊಳಿಸುವ ಮತ್ತು ರೆಂಬೆಗಳನ್ನು ಮಾತ್ರ ತೆರವುಗೊಳಿಸುವ ಸಂಬಂಧ ಪಟ್ಟಿ ಮಾಡಿ ಪ್ರತಿ ಮರಕ್ಕೂ ಸಂಖ್ಯೆ ನೀಡಿ ವಿವರಗಳನ್ನು ಸಮರ್ಪಕವಾಗಿ ನಿರ್ವಹಿಸಿರುವುದಾಗಿ ತಿಳಿಸಿದರು.

**ಮಾನ್ಯ ಅಧ್ಯಕ್ಷರು** : ಮಾತನಾಡುತ್ತಾ ಗಾಯತ್ರಿದೇವಿ ಉದ್ಯಾನವನದಲ್ಲಿ ಸಸಿಗಳನ್ನು ಬೆಳೆಸುವ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿದರು.

**ಸಂಚಾಲಕರು** : ಇವರು ಈ ಉದ್ಯಾನವನದಲ್ಲಿ ವುಡ್ ಲಾಟ್ ಆಗಿ ಮಾಡುವುದು ಸೂಕ್ತವೆಂದು ಅಭಿಪ್ರಾಯಪಟ್ಟರು.

**ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ಪರಿಸರಾಧಿಕಾರಿಗಳು, ಬಿ.ಎಂ.ಆರ್.ಸಿ.ಎಲ್** : ರವರು ಪ್ರತಿಕ್ರಿಯಿಸುತ್ತಾ ಉದ್ಯಾನವನವನ್ನು **"ಮರ ಉದ್ಯಾನ"** ವಾಗಿ ಅಭಿವೃದ್ಧಿ ಪಡಿಸಿದಲ್ಲಿ ಉತ್ತಮ ಹಸಿರು ವಾತಾವರಣ ಸೃಷ್ಟಿಸಿದಂತಾಗುತ್ತದೆಂದು ಅಭಿಪ್ರಾಯ ಪಟ್ಟರು.

**ಮಾನ್ಯ ಅಧ್ಯಕ್ಷರು ಮತ್ತು ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ಪರಿಸರಾಧಿಕಾರಿಗಳು, ಬಿ.ಎಂ.ಆರ್.ಸಿ.ಎಲ್** : ರವರು ಈ ಉದ್ಯಾನವನಗಳಲ್ಲಿ ಹಣ್ಣು ಹಂಪಲು ಬಿಡುವ ಸಸಿಗಳನ್ನು ಬೆಳೆಸುವುದು ಉತ್ತೇಜನಕಾರಿಯೆಂದು ಅಭಿಪ್ರಾಯಪಟ್ಟರು.

ಈ ಸಂಬಂಧ **ಡಾ. ಸುಬ್ಬರಾಯ ಪ್ರಸನ್ನ** : ಇವರು ಮಳೆ ಸಂಗ್ರಹಣಾ ವಿನ್ಯಾಸಗಳ ಕಾಮಗಾರಿಗಳನ್ನು ನಿರ್ವಹಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟರು.

**ಮಾನ್ಯ ಅಧ್ಯಕ್ಷರು** : ಸಸಿಗಳ ಜಾತಿಯ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುತ್ತ ಪಂಚವಲ್ಕಲಾಸ್ ರೀತಿಯ ಸಸಿಗಳನ್ನು ನೆಟ್ಟು ಪೋಷಿಸುವುದು ಸಾರ್ವಜನಿಕವಾಗಿ ಒಳ್ಳೆಯದೆಂದು ಅಭಿಪ್ರಾಯಪಟ್ಟರು.

**ಸಂಚಾಲಕರು** : ಈ ವಿಷಯವಾಗಿ ಮಾತನಾಡುತ್ತಾ ಉದ್ಯಾನವನದ ತೇವಾಂಶವನ್ನು ಸಂರಕ್ಷಿಸುವ ದೃಷ್ಟಿಯಿಂದ ಮತ್ತು ಆಯಾ ಕಟ್ಟಿನ ಸಸಿಗಳನ್ನು ಒಣಗುವುದರಿಂದ ತಪ್ಪಿಸುವ ಸಂಬಂಧ ತೇವಾಂಶವನ್ನು ನೀಡುವ ಜಾತಿಯ ಬಸುರಿ ಮರದ ಜಾತಿಯ ಸಸಿಗಳನ್ನು ಬೆಳೆಸಿದಲ್ಲಿ ಸಸಿಗಳಿಗೆ ನೀರುಣಿಸುವ ಕಾರ್ಯವನ್ನು ಬಹುತೇಕ ಕಡಿಮೆಗೊಳಿಸಬಹುದೆಂದು ಅಭಿಪ್ರಾಯಪಟ್ಟರು.

**ಡಾ. ಡಿ.ಸಿ ಶರ್ಮ**: ರವರು ಪ್ರತಿಕ್ರಿಯಿಸುತ್ತಾ ಸಾಮಾನ್ಯವಾಗಿ ಜವಳಿ ಕಾರ್ಖಾನೆಗಳು ಬಹುತೇಕ ಬೃಹದಾಕಾರವಾಗಿ ಬೆಳೆಯುವ ಸಸಿಗಳನ್ನು ನೆಟ್ಟಿದ್ದು ಈ ಸಸಿಗಳು ತಾವೇ ಬೃಹದಾಕಾರವಾಗಿ ಬೆಳೆಯುವ ಅಂಶವನ್ನು ಹೊಂದಿರುವುದರಿಂದ ಈ ರೀತಿಯ ಕ್ರಮಗಳಿಗೆ ಉತ್ತೇಜನ ನೀಡುವುದು ಸೂಕ್ತವೆಂದು ಅಭಿಪ್ರಾಯಪಟ್ಟರು.

**ಮಾನ್ಯ ಅಧ್ಯಕ್ಷರು** : ಈ ಎಲ್ಲಾ ಅಂಶಗಳನ್ನು ಒಂದು ನಮೂನೆಯಲ್ಲಿ ತಯಾರಿಸಿ ವೆಬ್ ಸೈಟ್‌ನಲ್ಲಿ ಪ್ರಸ್ತುತ ಪಡಿಸಲು ಸೂಚಿಸಿದರು. ಮುಂದುವರೆದು, ಈ ನಮೂನೆಯಲ್ಲಿ ಅಂತಿಮ ಷರಾ ಕಾಲಂನಲ್ಲಿ ಹಣಕಾಸಿನ ವೆಚ್ಚ ಮೆಟ್ರೋ ಅಥವಾ ಬಿಬಿಎಂಪಿ ವತಿಯಿಂದ ಎಂಬ ಬಗ್ಗೆ ನಮೂದಿಸುವುದು ಸಮಂಜಸವೆಂದು ಅಭಿಪ್ರಾಯಪಟ್ಟರು.

**ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಉಪ ವಿಭಾಗ-2** : ರವರು "ಯೋಜನಾ ಮುಖ್ಯಾರ್ಥ" ದಲ್ಲಿ ಶಿವಶಂಕರ ವೃತ್ತದಿಂದ ಸಿದ್ದಯ್ಯ ವೃತ್ತದವರೆಗೆ 29 ಮರಗಳನ್ನು ಯಥಾಸ್ಥಿತಿಯಲ್ಲಿ ಉಳಿಸುವುದಾಗಿ ತಿಳಿಸುತ್ತಾ ಉಳಿದ ಮರಗಳಲ್ಲಿ 34 ಮರಗಳು ಅರಣ್ಯ ಕೃಷಿಕ ರೀತಿಯಲ್ಲಿ ಪರಿಪಕ್ವತೆ ಹೊಂದಿರುವುದಾಗಿ ತಿಳಿಸಿದರು.

ಮಾನ್ಯ ಅಧ್ಯಕ್ಷರು : ಪ್ರತಿಕ್ರಿಯಿಸುತ್ತಾ ರ್‍ಯಾಂಪ್ ಪ್ರದೇಶದ ಮರಗಳನ್ನು ಮಾತ್ರ ತೆರವುಗೊಳಿಸುವುದು ಮತ್ತು ಈ ಸಂಬಂಧ ಅಗತ್ಯ ಸಸಿಗಳನ್ನು ಬೆಳೆಸುವ ಪ್ರಕ್ರಿಯೆ ನಿರ್ವಹಿಸಬೇಕೆಂದು ಸೂಚಿಸಿದರು.

ಸಂಚಾಲಕರು : ಪ್ರತಿಕ್ರಿಯಿಸುತ್ತಾ ಈ ವಿವರಗಳ ರೀತ್ಯಾ 52 ಮರಗಳನ್ನು ಯಥಾಸ್ಥಿತಿ ಉಳಿಸಿಕೊಂಡು 76 ಮರಗಳನ್ನು ಗುರುತಿಸಿದ್ದು ಈ ಮರಗಳು ಬೀಳುವ ಸ್ಥಿತಿಯಲ್ಲಿರುವ ಮರಗಳಾಗಿದ್ದು ತೆರವುಗೊಳಿಸಲೇಬೇಕೆಂದು ತಿಳಿಸುತ್ತಾ ಉಳಿದಂತೆ 230 ಮರಗಳನ್ನು ಕಾಮಗಾರಿ ದೃಷ್ಟಿಯಿಂದ ಪೂರ್ಣ ಪ್ರಮಾಣದಲ್ಲಿ ತೆರವುಗೊಳಿಸಬೇಕೆಂದು ತಿಳಿಸಿದರು.

ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ಪರಿಸರಾಧಿಕಾರಿಗಳು, ಬಿ.ಎಂ.ಆರ್.ಸಿ.ಎಲ್ : ರವರು ಪ್ರತಿಕ್ರಿಯಿಸುತ್ತಾ ಈ ಪ್ರದೇಶದಲ್ಲಿ ರಸ್ತೆ ನಿರ್ಮಾಣಕ್ಕೆ ಸ್ಥಳಾವಕಾಶ ಕಲ್ಪಿಸಿದ್ದು ಪರಿಹಾರಾತ್ಮಕ ನೆಡುತೋಪು ಬೆಳೆಸುವುದಾಗಿ ಬಿ.ಎಂ.ಆರ್.ಸಿ.ಎಲ್ ವತಿಯಿಂದ ಹಣವನ್ನು ನೀಡುವುದಾಗಿ ಭರವಸೆ ನೀಡಿದರು.

ಈ ಸಂಬಂಧ ಅವರು ಬೇರೆ ವಿಧವಾದ ಸುರಕ್ಷಿತಾ ಕ್ರಮಗಳನ್ನು ತೆಗೆದುಕೊಂಡು ಬೆಂಗಳೂರು ಮೆಡಿಕಲ್ ಕಾಲೇಜ್, ವೆಂಕಟರಮಣ ದೇವಸ್ಥಾನ ಮತ್ತು ಟಿಪ್ಪುಸುಲ್ತಾನ್ ಬೇಸಿಗೆ ಅರಮನೆ ಈ ಸ್ಥಳಗಳನ್ನು ಸಂರಕ್ಷಿಸುವ ಸಲುವಾಗಿ ಬಿ.ಎಂ.ಆರ್.ಸಿ.ಎಲ್ ಕಾಮಗಾರಿಯ ಪಂಕ್ತೀಕರಣವನ್ನು ಸೂಕ್ತವಾಗಿ ಮಾರ್ಪಾಟು ಮಾಡಿರುವುದಾಗಿ ತಿಳಿಸಿದರು.

ಮುಂದುವರೆದು ಈ ಸಂಬಂಧ ಅಂತರಾಷ್ಟ್ರೀಯ ಭೌತಿಕ ಪ್ರಯೋಗಾಲಯದ ವತಿಯಿಂದ ಈ ಕ್ರಮವನ್ನು ಜರುಗಿಸಿದ್ದು ಅವರು ಸೂಕ್ತ ವರದಿಯನ್ನು ಸಲ್ಲಿಸಿದ್ದು ಈ ವರದಿಯ ಆಧಾರದ ಮೇಲೆ ಈ ಯಾವುದೇ ಪ್ರಾಚೀನ ಕಟ್ಟಡಗಳಿಗೆ ಹಾನಿಯುಂಟಾಗದ ರೀತಿಯಲ್ಲಿ ಕಾಮಗಾರಿ ರೂಪಿಸಿರುವುದಾಗಿ ತಿಳಿಸಿದರು.

ಡಾ. ಡಿ.ಸಿ ಶರ್ಮ: ರವರು ಪ್ರತಿಕ್ರಿಯಿಸುತ್ತಾ ಈ ಸಂಬಂಧ ಅನ್ಯ ಮಾರ್ಗವನ್ನು ಸಹ ಪ್ರಯತ್ನಿಸುವುದು ಸಮಂಜಸವೆಂದು ಸೂಚಿಸಿದರು.

ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ಪರಿಸರಾಧಿಕಾರಿಗಳು, ಬಿ.ಎಂ.ಆರ್.ಸಿ.ಎಲ್ : ರವರು ಪ್ರತಿಕ್ರಿಯಿಸುತ್ತಾ ಯಾವುದೇ ಹಾನಿಗೆ ಬಿಎಂಆರ್‌ಸಿಎಲ್ ಪರಿಹಾರ ಮೊತ್ತ ನೀಡಲು ಸಿದ್ಧವಿದೆ ಎಂದು ಸಭೆಯ ಗಮನಕ್ಕೆ ತಂದರು.

ಡಾ. ಸುಬ್ಬರಾಯ ಪ್ರಸನ್ನ : ರವರು ಪ್ರತಿಕ್ರಿಯಿಸುತ್ತಾ ಈ ಸಂಬಂಧ ತಾಂತ್ರಿಕವಾಗಿ ಸಮರ್ಪಕವಾಗಿದ್ದಲ್ಲಿ ಮತ್ತು ಕರ್ನಾಟಕ ವೃಕ್ಷ ಕಾಯಿದೆ ಯಡಿಯಲ್ಲಿ ಯೋಜನೆ ಸಮರ್ಪಕವಾಗಿ ರೂಪಿಸಿರುವುದಾಗಿದೆ ಎಂದು ಪರಿಗಣಿಸಿದ್ದಲ್ಲಿ ಸೂಕ್ತ ಮಾಹಿತಿಯೊಡನೆ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಕ್ರಮ ತೆಗೆದುಕೊಳ್ಳುವುದೆಂದು ಅಭಿಪ್ರಾಯಪಟ್ಟರು.

ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ಪರಿಸರಾಧಿಕಾರಿಗಳು, ಬಿ.ಎಂ.ಆರ್.ಸಿ.ಎಲ್ : ರವರು ಇಐಎ ವರದಿಯನ್ನು ಪೂರ್ಣ ಪ್ರಮಾಣದಲ್ಲಿ ಸಭೆಯಲ್ಲಿ ಹಾಜರು ಪಡಿಸಿ ಬೃಹತ್ ರಸ್ತೆಗಳು/ರಾಷ್ಟ್ರೀಯ ಹೆದ್ದಾರಿಗಳ ಚಿತ್ರಣವನ್ನು ನೀಡಿದರು. ಎಲ್ಲಾ ಕಾಮಗಾರಿಗಳ ಬಗ್ಗೆಯು ನಾಗರೀಕರ ಗಮನಕ್ಕೆ ತಂದು ಅವರೊಡನೆ ಚರ್ಚಿಸಿ ಅವರ ಅಭಿಪ್ರಾಯವನ್ನು ಪರಿಶೀಲಿಸಿ ಸಮಗ್ರವಾಗಿ ನಿರ್ವಹಿಸುವ ಕ್ರಮ ಈಗಾಗಲೇ ತೆಗೆದುಕೊಂಡಿರುವುದಾಗಿ ತಿಳಿಸಿದರು.

ಡಾ. ಸುಬ್ಬರಾಯ ಪ್ರಸನ್ನ : ರವರು ಪ್ರತಿಕ್ರಿಯಿಸುತ್ತಾ ಇಐಎ ವರದಿಯ ಜೊತೆಗೆ ಪಟ್ಟಣ ಯೋಜನೆ ಅಂಶಗಳನ್ನು ಸಹ ಪರಿಗಣಿಸಿ ಈ ವ್ಯಾಪ್ತಿಯಲ್ಲಿ ಇಐಎ ವರದಿಯನ್ನು ಗಣನೆಗೆ ತೆಗೆದುಕೊಳ್ಳುವುದು ಸಮಂಜಸವೆಂದು ಅಭಿಪ್ರಾಯಪಟ್ಟರು.

ಡಾ. ಡಿ.ಸಿ ಶರ್ಮ: ರವರು ಪ್ರತಿಕ್ರಿಯಿಸುತ್ತಾ ಯಾವುದೇ ರೀತಿಯ ವ್ಯೆತಿರಿಕ್ತ ಅಭಿಪ್ರಾಯಗಳಿದ್ದಲ್ಲಿ ಮತ್ತು ಸಾರ್ವಜನಿಕರಿಂದ ವಿರೋದವಿದ್ದಲ್ಲಿ ಇಐಎ ವರದಿಯಲ್ಲಿ ಈ ಅಂಶವನ್ನು ಅಳವಡಿಸಿ ನಿರ್ವಹಿಸುವುದು ಸಮಂಜಸವೆಂದು ಅಭಿಪ್ರಾಯಪಟ್ಟರು.

ಮಾನ್ಯ ಅಧ್ಯಕ್ಷರು : ಪ್ರತಿಕ್ರಿಯಿಸುತ್ತಾ ಪಟ್ಟಣ ಯೋಜನೆಯ ಚಾಪ್ಟರ್–5 ರ ಅಂಶಗಳನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಳಿಸುವ ಕ್ರಮ ತೆಗೆದುಕೊಳ್ಳಬೇಕೆಂದು ಸೂಚಿಸಿದರು.

ಡಾ. ಸುಬ್ಬರಾಯ ಪ್ರಸನ್ನ : ರವರು ಪ್ರತಿಕ್ರಿಯಿಸುತ್ತಾ ಸಾರ್ವಜನಿಕರ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಪಟ್ಟಣ ಯೋಜನಾ ಕಾಯ್ದೆಯನ್ನು ಅನುಸರಿಸಿ ಕಾರ್ಯನಿರ್ವಹಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟ ಕಾರಣ ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ಪರಿಸರಾಧಿಕಾರಿಗಳು, ಬಿಎಂ.ಆರ್.ಸಿ.ಎಲ್ ಇವರು ಸೂಕ್ತ ಕ್ರಮಗಳನ್ನು ಎಲ್ಲಾ ಸಾಧ್ಯಾ ಸಾಧ್ಯತೆಯ ವ್ಯಾಪ್ತಿಯಲ್ಲಿ ಪರಿಹರಿಸಿ ನಿರ್ವಹಿಸುವುದಾಗಿ ತಿಳಿಸಿದರು.

ಮಾನ್ಯ ಅಧ್ಯಕ್ಷರು : ರವರು ಡಾ. ಸುಬ್ಬರಾಯ ಪ್ರಸನ್ನ ರವರಿಗೆ ಕಾಯ್ದೆಯನ್ನು ಕೂಲಂಕುಷವಾಗಿ ಅಧ್ಯಯನ ಮಾಡಿ ಸಲಹೆಗಳನ್ನು ಮುಂದಿನ ಸಭೆಯಲ್ಲಿ ಮಂಡಿಸಲು ತಿಳಿಸಿದರು.

ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ಪರಿಸರಾಧಿಕಾರಿಗಳು, ಬಿ.ಎಂ.ಆರ್.ಸಿ.ಎಲ್ : ಇವರು ಪ್ರತಿಕ್ರಿಯಿಸುತ್ತಾ ಇಎಂಪಿ ಯೋಜನೆಯು ಯಾವುದೇ ಮಾರ್ಪಾಟಿಗೆ ಬದ್ಧವೆಂದು ಮತ್ತು ಯಾವುದೇ ಸಾರ್ವಜನಿಕ ಹಿತಾಸಕ್ತಿಯ ಮಾರ್ಪಾಟಿಗೂ ಸಹ ಬದ್ಧವೆಂದು ತಿಳಿಸಿದರು.

ಡಾ. ಪರಮೇಶ್: ರವರು ಪ್ರತಿಕ್ರಿಯಿಸುತ್ತಾ ಬಳ್ಳಾರಿ ರಸ್ತೆಯು ಮುಂಜಾನೆ 6.00 ಘಂಟೆಯಲ್ಲಿ ಯಾವುದೇ ರೀತಿಯ ಜನಸಂಚಾರಕ್ಕೆ ಸಮಂಜಸವಲ್ಲವೆಂದು ಅಭಿಪ್ರಾಯಪಡುತ್ತಾ ಮತ್ತು ಈ ಸಮಯದಲ್ಲಿ 6 ರಸ್ತೆಗಳ ಈ ಸ್ಥಳವನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಂಚರಿಸಲು ಸಮರ್ಪಕವಾಗಿಲ್ಲವೆಂದು ಮತ್ತು ಈ ರಸ್ತೆಯು ಯಾವುದೇ ರೀತಿಯ ರಸ್ತೆ ದಾಟಲು ಅಸಾಧ್ಯವಾದ ರಸ್ತೆಯಾಗಿರುವುದಾಗಿ ತಿಳಿಸಿದರು.

ಮಾನ್ಯ ಅಧ್ಯಕ್ಷರು : ಪ್ರತಿಕ್ರಿಯಿಸುತ್ತಾ ಮುಖ್ಯ ಅಭಿಯಂತರರು (ಬೃಹತ್ ರಸ್ತೆಗಳು) ಇವರು ಈ ಸ್ಥಳವನ್ನು ಪರಿಶೀಲಿಸಿ ಡಾ. ಡಿ.ಸಿ ಶರ್ಮರವರ ಅಭಿಪ್ರಾಯದಂತೆ ಮೇಲ್ ಸೇತುವೆ ಮೂಲಕ ರಸ್ತೆ ದಾಟುವ ಕ್ರಮ ತೆಗೆದುಕೊಳ್ಳುವ ಬಗ್ಗೆ ಅಗತ್ಯ ಕ್ರಮ ತೆಗೆದುಕೊಳ್ಳಲು ಸೂಚಿಸಿದರು.

ಡಾ. ಸುಬ್ಬರಾಯ ಪ್ರಸನ್ನ : ರವರು ಪ್ರತಿಕ್ರಿಯಿಸುತ್ತಾ ಸೋಫಿಯಾ ಶಾಲೆಯ ಅಧಿಕಾರಿಗಳನ್ನು ಸಂಪರ್ಕಿಸಿ ಅವರ ಸಲಹೆಗಳನ್ನು ಪಡೆದು ಕ್ರಮ ತೆಗೆದುಕೊಳ್ಳಲು ಕೋರಿದರು.

ಈ ಸಂಬಂಧ ಮಾನ್ಯ ಅಧ್ಯಕ್ಷರು ಪ್ರತಿಕ್ರಿಯಿಸುತ್ತಾ ಅವರೇ ಮುಖ್ಯ ಅಭಿಯಂತರರ ಜೊತೆ ಸೋಫಿಯಾ ಶಾಲೆಯ ವ್ಯವಸ್ಥಾಪಕರೊಡನೆ ಚರ್ಚೆ ನಡೆಸಿ ಮುಂದಿನ ಕ್ರಮಕ್ಕೆ ಸಲಹೆಗಳನ್ನು ನೀಡುವ ಬಗ್ಗೆ ಚರ್ಚಿಸುವುದಾಗಿ ತಿಳಿಸಿದರು.

ಅಧ್ಯಕ್ಷರು ಮುಂದುವರಿಯುತ್ತಾ, ಈಗಾಗಲೇ ಸರಿಸುಮಾರು 3000 ಎಕರೆ ಗುಂಡುತೋಪು ನಶಿಸಿಹೋಗಿದ್ದು, 10000 ಅಶ್ವತ್ಥಕಟ್ಟೆಗಳು ಹಾಳಾಗಿರುವುದಾಗಿ ಅಭಿಪ್ರಾಯಪಟ್ಟರು. ವಿಜಯನಗರ ವ್ಯಾಪ್ತಿಯಲ್ಲಿ 100 ಎಕರೆಯಷ್ಟು ಗುಂಡುತೋಪು ನಶಿಸಿಹೋಗಿರುವುದಾಗಿ ತಿಳಿಸಿದರು. ಪ್ರಾಸ್ತಾವಿಕವಾಗಿ ಮುಂದುವರಿಯುತ್ತಾ, ಅಧ್ಯಕ್ಷರು ಆನೇಕಲ್‌ನ ಪ್ರತಿ ಗ್ರಾಮೀಣ ಪ್ರದೇಶದಲ್ಲಿ ಅಂದಾಜು ಶೇ. 1.5 ಎಕರೆಯಷ್ಟು ಗುಂಡುತೋಪುಗಳಿದ್ದು, ಸರಿಸುಮಾರು 1 ಎಕರೆಯಿಂದ 10 ಎಕರೆವರೆಗೆ ಗಣಿಪ್ರದೇಶಗಳನ್ನು ಗುಂಡುತೋಪು ಸಲುವಾಗಿ ಮೀಸಲಿಡುವುದು ಸೂಕ್ತವೆಂದು ಅಭಿಪ್ರಾಯಪಟ್ಟರು. ಈ ಸಂಬಂಧ ಗ್ರಾಮೀಣ ಜನರಿಗೆ ಗುಂಡುತೋಪಿನ ಬಗ್ಗೆ ಬಹಳವಾದ ಜ್ಞಾನವಿದ್ದು, ಅರಣ್ಯೀಕರಣದ ಬಗ್ಗೆಯೂ ಸಹ ಸಾಕಷ್ಟು ತಿಳುವಳಿಕೆ ಇರುವುದಾಗಿ ತಿಳಿಸಿದರು. ಮೆಟ್ರೋದವರು ಗಣಿಪ್ರದೇಶಗಳನ್ನು ಮುಚ್ಚುವ ಸಂಬಂಧ ಸಸಿಗಳನ್ನು ನೆಡುವ ಕಾಮಗಾರಿ ನಿರ್ವಹಿಸುವ ಕ್ರಮಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಸೂಚಿಸಿದರು.

ಡಾ॥ ಸುಬ್ಬರಾಯ ಪ್ರಸನ್ನರವರು ಪ್ರತಿಕ್ರಿಯಿಸುತ್ತಾ, ರಾಜರಾಜೇಶ್ವರಿನಗರದ ಬಿಪಿಎ ಪ್ರದೇಶಗಳು ಉದ್ಯಾನವನಗಳಿಗೆ ಮೀಸಲಿದ್ದು, ಅಕ್ರಮವಾಗಿ ಕಟ್ಟಡಗಳು ಗ್ಲೋಬಲ್ ಟೆಕ್ನಾಲಜಿ ವತಿಯಿಂದ ಸಾಕಷ್ಟು ಒತ್ತುವರಿಯಾಗಿದ್ದು, ಅನಧಿಕೃತ ಕಟ್ಟಡಗಳು ನಿರ್ಮಾಣವಾಗಿರುವ ಬಗ್ಗೆ ತಿಳಿಸಿದರು.

ಮಾನ್ಯ ಅಧ್ಯಕ್ಷರು : ಈ ಸಂಬಂಧ ಈ ಕೆಳಗಿನಂತೆ ಸಲಹೆಗಳನ್ನು ನೀಡಿದರು.

1. ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಇವರಿಂದ ಗ್ಲೋಬಲ್ ಟೆಕ್ನಾಲಜೀಸ್‌ರವರು ಪಡೆದಿರುವ ಪ್ರದೇಶದ ವಿವರಗಳನ್ನು ಪಡೆಯುವುದು.
2. ಡಾ॥ ಸುಬ್ಬರಾಯ ಪ್ರಸನ್ನ ಮತ್ತು ಕಾರ್ಯಪಾಲಕ ಅಭಿಯಂತರರು ಸ್ಥಳ ಪರಿಶೀಲನೆ ನಡೆಸಿ ಅತಿಕ್ರಮಕ್ಕೊಳಗಾಗಿರುವ ಪ್ರದೇಶವನ್ನು ಗುರುತಿಸುವುದು.
3. ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ಪರಿಸರಾಧಿಕಾರಿಗಳು, ಬಿಎಂಆರ್‌ಸಿಎಲ್ ಇವರು ಗಣಿಪ್ರದೇಶಗಳನ್ನು ಗುರುತಿಸಿ ಮಳೆನೀರು ಸಂಗ್ರಹಣಾ ವಿನ್ಯಾಸಗಳನ್ನು ನಿರ್ಮಿಸುವ ಸಂಬಂಧ ಕ್ರಮ ತೆಗೆದುಕೊಳ್ಳಬೇಕು. ಈ ಸಂಬಂಧ ಜಂಟಿ ಆಯುಕ್ತರು, ರಾಜರಾಜೇಶ್ವರಿನಗರ ಇವರಿಗೆ ಪತ್ರ ಬರೆದು ರಾಮಸ್ವಾಮಿ ಕಮಿಟಿ ವರದಿಯನ್ನು ಪಡೆದು ಒಂದು ತಿಂಗಳೊಳಗಾಗಿ ವಿವರಗಳನ್ನು ಸಲ್ಲಿಸುವುದು.

ಮುಂದುವರಿಯುತ್ತಾ, ಆಯುಕ್ತರು, ಬಿಬಿಎಂಪಿ ಇವರನ್ನು ಸಮಿತಿಯ ಸಭೆಗೆ ಹಾಜರಾಗಲು ಆಹ್ವಾನಿಸಬೇಕೆಂದು ತಿಳಿಸಿದರು.

ಒಟ್ಟಾರೆ ಸಮಿತಿಯು ಈ ಸಮಗ್ರ ಚರ್ಚೆಯ ಮೂಲಕ ಮೆಟ್ರೋ ಕಾಮಗಾರಿ ಸಂಬಂಧ ಈ ಕೆಳಗಿನಂತೆ ಮರಗಳನ್ನು ತೆರವುಗೊಳಿಸಲು ಮಾನ್ಯ ಅಧ್ಯಕ್ಷರ ಮತ್ತು ಗೌರವಾನ್ವಿತ ಸದಸ್ಯರ ಒಪ್ಪಿಗೆಯ ಮೇರೆಗೆ ಅನುಮೋದನೆ ನೀಡಿದೆ.

| ರಸ್ತೆಯ ವಿವರ | ಸ್ಥಳ | ಪೂರ್ಣವಾಗಿ ತೆರವುಗೊಳಿಸುವ ಮರಗಳ ಸಂಖ್ಯೆ | ರೆಂಬೆಗಳನ್ನು ತೆರವುಗೊಳಿಸುವ ಮರಗಳ ಸಂಖ್ಯೆ |
|---|---|---|---|
| ಯಶವಂತಪುರದಿಂದ ಸ್ವಸ್ತಿಕ್‌ವರೆಗೆ | ರಸ್ತೆಯ ಎಡಭಾಗ | 102 | 21 |
| | ರಸ್ತೆಯ ಬಲಭಾಗ | 90 | 21 |
| | ಒಟ್ಟು | 192 | 42 |
| ಶಿವಶಂಕರ ವೃತ್ತದಿಂದ ಸಿದ್ದಯ್ಯ ವೃತ್ತದವರೆಗೆ | ರಸ್ತೆಯ ಎಡಭಾಗ | 171 | 13 |
| | ರಸ್ತೆಯ ಬಲಭಾಗ | 154 | 29 |
| | ಒಟ್ಟು | 325 | 42 |

| | | | |
|---|---|---|---|
| ಮೈಸೂರು ರಸ್ತೆಯಿಂದ ಮಾಗಡಿ ರಸ್ತೆಯವರೆಗೆ | ರಸ್ತೆಯ ಎಡಭಾಗ | 69 | 04 |
| | ರಸ್ತೆಯ ಬಲಭಾಗ | 110 | 22 |
| | ಒಟ್ಟು | 179 | 26 |

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಅಧ್ಯಕ್ಷರು
ಸುಸ್ಥಿರ ಅಭಿವೃದ್ಧಿ ಅಧಿಕಾರಸ್ಥ ತಾಂತ್ರಿಕ ಸಲಹಾ ಸಮಿತಿ